ಕಾಂತ ಸಂಹಿತೆ ಎಂದು ಕರೆಯುವುದು. ಆದ್ದರಿಂದ ಹೆಣ್ಣುಮಕ್ಕಳು ಯಾವಾಗಲೂ ಪ್ರಬಲರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ನಾನು ಹೇಳುತ್ತೇನೆ, ಹೆಣ್ಣನ್ನು ಹೇಗೆ ಮೋಸ ಮಾಡುತ್ತಾರೆ ಎಂದರೆ, ನೀನು ಇಂದ್ರಚಂದ್ರ ಎಂದು ಹೇಳಿ ಹೊಗಳಿ, ರಾತ್ರಿ ಹೊತ್ತಾಗಿ ಬಂದರೂ ಕೂಡ ಕಾರಣಗಳನ್ನು ಹೇಳಿ ಮರುಳು ಮಾಡುವುದು ತಮಗೆ ಗೊತ್ತಿದೆ. ನೀವು ಹೆಣ್ಣನ್ನು ಹೇಗೆ ಮೋಸ ಮಾಡುತ್ತೀರಿ ಎಂಬುದು ಪ್ರಪಂಚದಲ್ಲಿ ಎಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ನಾನು ಹೇಳುವುದಿಲ್ಲ. "ಹೆಣ್ಣು ಹೆಣ್ಣೆಂದು ಜರಿಯುವವರು ಕಣ್ಣು ಕಾಣದ ಗಾಂಪರರು" ಎಂದು ಅದಿಬಿದಿಯ ಧರ್ಮದಲ್ಲಿ ಸಂಜಿ ಹೊನ್ನಮ್ಮ ಹೇಳಿದ್ದು ಗೊತ್ತಿದೆ. ಆದ್ದರಿಂದ ತಾವೆಲ್ಲರೂ ಕೂಡ ಕಣ್ಣುಕಾಣದ ಗಾಂಪರಾಗಿದ್ದೀರೇನೋ ಏಂಬ ಸಣಕೆ.

ಅಧ್ಯಕ್ಷರು : ಪ್ರಮೀಳಾರವರೆ, ಆತುರಾತುರವಾಗಿ ದೋಣಿ ನಡೆಸಿದ ನಾವಿಕನ ಕಥೆ ಕೂಡ ಇದೆ. ಪದ ಮುಟ್ಟಿದಮೇಲೆ.

ಕುಂದಾಪುರಕ್ಕೊಂದು ಟ್ರಾಫಿಕ್ ಪೋಲೀಸ್ ಠಾಣೆ.

148 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ರಸ್ತೆ ಅಪಘಾತ ಹಾಗೂ ವಾಹನಗಳ ಜಿಮುವಿಲ್ಲವಿಕಿವುದರಿಂದ ಟ್ರಾಫಿಕ್ ಪೋಲೀಸ್ ಸ್ಟೇಷನ್ ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಈ ವಾಹನ ಅಪಘಾತಗಳನ್ನು ಮತ್ತು ವಾಹನಗಳನ್ನು ತಡೆಯಲು ಸರಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) ಇಲ್ಲ.

ಆ) ವಾಹನ ಅಪಘಾತಗಳನ್ನು ತಡೆಯಲು ಪ್ರತಿದಿನ ವಾಹನ ತಪಾಸಣೆ ನಡೆಸುವುದಲ್ಲದೆ, ಅತಿವೇಗವಲ್ಲಿ ಬಿಡುವ ವಾಹನಗಳನ್ನು ರಾಡಾರ ಗನ್ ಮೂಲಕ ಪತ್ತೆ ಹಚ್ಚಿ ಕೇಸುಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ರಸ್ತೆ ಉಬ್ಬುಗಳನ್ನು ರಚಿಸಿ ವೇಗವನ್ನು ಕುಂಠಿತಗೊಳಿಸುವ ಎಲ್ಲಾ ಕ್ರಮಗಳನ್ನು ಸಹ ತಗಮಕೊಳ್ಳಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಟ್ರಾಫಿಕ್ ಪೋಲೀಸ್ ಸ್ಟೇಷನ್ ಮಾಡುತ್ತೀರಾ ಎಂದು ಕೇಳಿರತಕ್ಕನನ್ನ ಪ್ರಶ್ನೆಗೆ, ರಾಡಾರಗನ್ ಮೂಲಕ ವಾಹನಗಳ ವೇಗವನ್ನು ಪತ್ತೆ ಹಚ್ಚಲಾಗುವುದು, ಅದರ ಜೊತೆಗೆ ರಸ್ತೆಗಳಲ್ಲಿ ಉಬ್ಬುಗಳನ್ನು ರಚಿಸಲಾಗುವುದು ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದೀರಿ.

ಬಹುಶಃ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದೊಂದು ನಿಮಿಷಕ್ಕೆ ಒಂದು ವಾಹನ ಸಂಚರಿಸುತ್ತದೆ. ಅದನ್ನು ತಡೆಯಬೇಕಾದರೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿರತಕ್ಕ ತಾಲ್ಲೂಕು ಕೇಂದ್ರಗಳಲ್ಲಿ ಈ ಟ್ರಾಫಿಕ್ ಪೋಲೀಸ್ ಸ್ಟೇಷನ್ನು ಮಾಡಿದರೆ ಮಾತ್ರ ಉಪಯೋಗವಾಗುತ್ತದೆ ಎಂಬುದು ನನ್ನ ಅನಿಸಿಕೆ. ಅದಕ್ಕೆ ಇಲ್ಲ ಎನ್ನತಕ್ಕಂಥ ಉತ್ತರವನ್ನು ತಾವು ಕೊಟ್ಟಿದ್ದೀರಿ, ಬದಲಿ ವ್ಯವಸ್ಥೆ ಏನು ಮಾಡುತ್ತೀರಿ ಎನ್ನತಕ್ಕದ್ದಕ್ಕೆ ರಸ್ತೆ ತಡೆಗಳನ್ನು ಮಾಡುತ್ತೀರ ಎಂಬುದನ್ನು ತಾವು ಹೇಳಿದ್ದೀರಿ. ಅದು ಸಮರ್ಪಕವಲ್ಲ. ಏಕೆಂದರೆ ತಾವು ಯಾರೋ ಕೊಟ್ಟ ಉತ್ತರವನ್ನು ಓದಿ ಹೇಳುತ್ತಿದ್ದೀರಿ ತಾವು ಒಮ್ಮೆ ಕುಂದಾಪುರಕ್ಕೆ ಬಂದು ನೋಡಿ, ಆ ರೀತಿಯ ಕೆಲಸಗಳನ್ನು ಎಲ್ಲೆ ಮಾಡಿದ್ದಾರೆ, ಅಲ್ಲಿ ಎಲ್ಲಿ ವಾಹನಗಳನ್ನು ತಡೆಯತಕ್ಕಂಥ ವ್ಯವಸ್ಥೆ ಆಗುತ್ತಿದೆ ಅಥವಾ ಈ ವಾಹನಗಳ ಮಿತಿಯನ್ನು ಕಡಿಮೆಗೊಳಿಸುವುದಕ್ಕೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೆ, ಕುಂದಾಪುರಕ್ಕೆ ಸಧ್ಯದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಷನ್ನು ಮಂಜೂರು ಮಾಡತಕ್ಕಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಅಲ್ಲಿ ಟ್ರಾಫಿಕ್ ಕಂಜೆಷನ್ ಇದೆ ಮತ್ತು ಅಪಘಾತಗಳು ಜಾಸ್ತಿಯಾಗುತ್ತಿವೆ ಎಂದು ಹೇಳಿ ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ಕಡಿಮೆ ಮಾಡಲಿಕ್ಕೆ ನಾನು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ತೀವ್ರ ಎಂಬ ಪದವನ್ನು ನಾವು ಕೇಳಿ ಕೇಳಿ ಸಾಕಾಯಿತು. ತೀವ್ರ ಅಂದರೆ ಏನು ಎಂದು ಹಳೆ? ತಾವು ಏನೋ ಒಂದು ಉತ್ತರವನ್ನು ಕೊಟ್ಟು ನುಣುಚಿಕೊಳ್ಳುವುದು ಬೇಡ, ಅಲ್ಲೇನಾದರೂ ವ್ಯವಸ್ಥಿತವಾದ ಕೆಲಸ ಏನು ಮಾಡುತ್ತೀರಿ? ಈ ಟ್ರಾಫಿಕ್ ಪೋಲೀಸ್ ಸ್ಟೇಷನನನು ಮಾಡದೆ ಅಪಘಾತಗಳನ್ನು ತಡೆಯಲಿಕ್ಕೆ ತಮ್ಮ ಕ್ರಮ ಏನು ಎಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ, ಹೆಚ್ಚಿನ ನಿಗಾವಹಿಸಲಿಕ್ಕೆ, ಪೋಲೀಸರ ಹೆಚ್ಚಿನ ಗಸ್ತನ್ನು ಮಾಡುವುದಕ್ಕೆ, ಸ್ಪೀಡ್ ಬ್ರೇಕರನ್ನು ಮಾಡಲಿಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈಗ ಪೋಲೀಸ್ ಸ್ಟೇಷನನ್ನು ಮಂಜೂರು ಮಾಡತಕ್ಕಂಥ ಸ್ಥಿತಿಯಲ್ಲಿ ನಾವು ಇಲ್ಲ. ಕಾರಣ ಏನು ಎಂದರೆ ಐವತ್ತು ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಿಗೆ ನಾವು ಇನ್ನೂ ಟ್ರಾಫಿಕ್ ಪೋಲೀಸ್ ಸ್ಟೇಷನಗಳನ್ನು ಕೊಡುವುದಕ್ಕೆ ಆಗಿಲ್ಲ. ಕುಂದಾಪುರದ ಜನಸಂಖ್ಯೆ ಇಪ್ಪತ್ತು ಸಾವಿರದಿಂದ ಮೂವತ್ತು ಸಾವಿರ ಆಗುತ್ತದೆ. ಅದರಿಂದ ಕೈಯಲ್ಲಿ ಮಾಡಲಿಕ್ಕೆ ಆಗದೇ ಇರುವುದನ್ನು ನಾನು ಮಾಡುತ್ತೇನೆ ಎಂದು ಸುಳ್ಳನ್ನು ಹೇಗೆ ಹೇಳುವುದಕ್ಕಾಗುತ್ತದೆ. ಅದರಿಂದಾಗಿ ನಾನು ಇಷ್ಟೇ ಹೇಳುತ್ತೇನೆ, ಟ್ರಾಫಿಕ್ ಜಾಸ್ತಿಯಾಗಿರತಕ್ಕಂಥನ್ನು ಕಡಿಮೆ ಮಾಡಲಿಕ್ಕೆ, ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ ಪೋಲೀಸರ ಮೂಲಕವಾಗಿ ಹೆಚ್ಚಿನ ಬಂದೋಬಸ್ತ ಮಾಡಲಿಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು